**ಸಿವಿಲ್ ಜಡ್ಜ್ ಹಾಗೂ ಹೆ.ಪ್ರ.ದ.ನ್ಯಾ.ದಃ ನ್ಯಾಯಾಲಯಃ ತರೀಕೆರೆ**

**ಸಿ.ಸಿ ಸಂಖ್ಯೆ ::1084/2024**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಶಬೀರ್ ಅಹಮದ್ | **PW-2** |
| **ತಂದೆಯ ಹೆಸರು** | : | ಮೊಹಮದ್ ಸತಾರ್ | **CW-2** |
| **ವಯಸ್ಸು** | : | 70 ವರ್ಷ | |
| **ಉದ್ಯೋಗ** | : | ಏನು ಇಲ್ಲ | |
| **ವಾಸಸ್ಥಳ** | : | ಶಿವಮೊಗ್ಗ | |

**ದಿನಾಂಕಃ10-05-2025 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: ಮಾನ್ಯ A.P.P ರವರಿಂದ ::**

ಆರೋಪಿ ನನ್ನ ಮಗನ ಸ್ನೇಹಿತ ಆಗಿರುತ್ತಾರೆ. ಚಾಸಾ 3 ನನ್ನ 2 ನೇ ಹೆಂಡತಿ. ಚಾಸಾ 1 ನನ್ನ ಮಗ.

ದಿಃ 23.02.2024 ರಂದು ಬೆಳಗ್ಗೆ ಸುಮಾರು 10.30 ಗಂಟೆ ಸಮಯದಲ್ಲಿ ಶಿವಪುರ-ಕೋರನಹಳ್ಳಿ ಮಧ್ಯೆ ಬೋಕಿಕೇರೆ ಗೋವಿಂದಪ್ಪ ರವರ ಜಮೀನು ಹಾದು ಹೋಗಿರುವ ಎನ್ ಹೆಚ್ 206 ರಸ್ತೆಯಲ್ಲಿ ನಾನು, ನನ್ನ ಮೃತ ಹೆಂಡತಿ ಮತ್ತು ಚಾಸಾ 1 ಮತ್ತು 3 ರವರು ಬಾಣವಾರಕ್ಕೆ ಹೋಗಲು ನಮ್ಮ ಸಂಬಂಧಿಕರ ಕೆ ಎ 04 ಎಂ ಡಿ 7052 ಸಂಖ್ಯೆಯ ಒಂದು ಕಾರಿನಲ್ಲಿ ಹೋಗುತ್ತಿದ್ದು ಸದರಿ ಕಾರನ್ನು ಆರೋಪಿ ಚಾಲನೆ ಮಾಡುತ್ತಿದ್ದರು. ಮೇಲೆ ಹೇಳಿದ ಸ್ಥಳಕ್ಕೆ ನಾವು ತಲುಪಿದಾಗ ಸದರಿ ಕಾರ್ ಬಲ ಬದಿಯ ಡಿವೈಡರ್ ಗೆ ಡಿಕ್ಕಿ ಹೊಡೆದು ಅದು ಪಲ್ಟಿಯಾಗಿ ಎಡ ಬದಿಯ ಜಮೀನಿಗೆ ಹೋಗಿ ಬಿದ್ದಿರುತ್ತದೆ. ಸದರಿ ಅಪಘಾತದಿಂದ ನನಗೆ ಬಲ ಭಾಗಕ್ಕೆ ಪಕ್ಕೆಗೆ, ಮೈಕೈಗೆ ಪೆಟ್ಟಾಗಿರುತ್ತದೆ, ಚಾಸಾ 3 ರವರಿಗೆ ತಲೆಗೆ, ಮೈಕೈಗೆ ಪೆಟ್ಟಾಗಿರುತ್ತದೆ ಮತ್ತು ಚಾಸಾ 1 ರವರಿಗೆ ಭುಜಕ್ಕೆ ಪೆಟ್ಟಾಗಿರುತ್ತದೆ. ಸದರಿ ಅಪಘಾತದಿಂದ ನನ್ನ ಮೊದಲನೇ ಹೆಂಡತಿ ಮಜಾನ್ ಬೀ ರವರ ಹೊಟ್ಟೆಗೆ, ಹಣೆಗೆ, ಪಕ್ಕೆಗೆ, ಕೈ ಕಾಲುಗಳಿಗೆ ಮತ್ತು ಮುಖಕ್ಕೆ ತೀವ್ರವಾದ ಪೆಟ್ಟು ಬಿದ್ದು ನಂತರ ಅವರನ್ನು ಆಸ್ಪತ್ರೆಗೆ ಸೇರಿಸಿದ್ದು ಅವರು ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿರುತ್ತಾರೆ. ಇದನ್ನು ಹೊರತುಪಡಿಸಿ ಈ ಪ್ರಕರಣದ ಬಗ್ಗೆ ಇತರೇ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಯವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ ಅಂತೆಯೇ ಪರಿಗಣಿಸಿ ಅನುಮತಿ ನೀಡಲಾಯಿತು)

**::ಪಾಟೀಸವಾಲು :: ಮಾನ್ಯ A P P ರವರಿಂದ ::**

ನಾನು ಹೇಳುತ್ತಿರುವ ಅಪಘಾತವು ಆರೋಪಿಯ ಅತಿ ವೇಗ ಹಾಗೂ ಅಜಾಗರುಕತೆಯಿಂದ ಆಗಿರುತ್ತದೆ ಎಂದರೆ ಸರಿಯಲ್ಲ.

ಈ ಬಗ್ಗೆ ನಾನು ದಿನಾಂಕ 08.03.2024 ರಂದು ಪೊಲೀಸರಿಗೆ "ಚಾಲಕ ಮೆಹಬೂಬ್...... ಚಾಲನೆ ಮಾಡಿ" ಎಂದು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಸದರಿ ಹೇಳಿಕೆಯನ್ನು ಅಲ್ಲಗಳೆದ ಕಾರಣ ಆ ಭಾಗವನ್ನು ನಿಪಿ12 ಎಂದು ಗುರುತಿಸಲಾಯಿತು. ಈ ಪ್ರಕರಣದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದರೂ ಈಗ ಆರೋಪಿ ಜೊತೆ ಶಾಮಿಲಾಗಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**:: ಪಾಟೀ ಸವಾಲು :: ಆರೋಪಿ ಪರ ವಕೀಲರಿಂದ ::**

**( ಪಾಟೀ ಸವಾಲು ಇರುವುದಿಲ್ಲ)**

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

sd/-

ಸಿ.ಜೆ. ಮತ್ತು ಹೆ. ಜೆ.ಎಮ್.ಎಫ್.ಸಿ.,

ತರೀಕೆರೆ .

ಸಾಕ್ಷಿಯ ಸಹಿ::